ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/20/ರಪು/2015-16 /ಉಗ್ರಾಣ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:14.09.2018.

ಇವರಿಗೆ:

ಸಂಚಾಲಕರು,
ಎಸ್.ಎಲ್.ಬಿ.ಸಿ ಮತ್ತು ಜನರಲ್ ಮ್ಯಾನೇಜರ್,
ಸಿಂಡಿಕೇಟ್ ಬ್ಯಾಂಕ್, ಕಾರ್ಪೋರೇಟ್ ಕಛೇರಿ,
ಗಾಂಧಿನಗರ, ಬೆಂಗಳೂರು-560009.

ಮಾನ್ಯರೆ,

ವಿಷಯ: ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ 412 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶುಲ್ಕ ವಸೂಲಾತಿಯನ್ನು ಬ್ಯಾಂಕ್ (ಚಲನ್) ಮೂಲಕ ವ್ಯವಹರಿಸಲು ಅಗತ್ಯ ಕ್ರಮ ವಹಿಸುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ರಾಜ್ಯಾದ್ಯಾದಂತ 412 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇದ್ದು, ಸುಮಾರು 05 ಲಕ್ಷ ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುತ್ತಾರೆ.

ಭಾರತ ಸರ್ಕಾರದ "ಡಿಜಿಟಲ್ ಇಂಡಿಯ" ಪ್ರಕಾರ ನಗದು ವ್ಯವಹಾರವನ್ನು ಕನಿಷ್ಠ ಮಟ್ಟಕ್ಕೆ ಇಳಿಸಬೇಕಾಗಿರುವುದರಿಂದ ಹಾಗೂ ಆಡಳಿತ ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿಯನ್ನು ಪಾರದರ್ಶಕತೆ ಕಾಪಾಡುವ ಹಿನ್ನೆಲೆಯಲ್ಲಿ ಈಗಾಗಲೇ ಈ ಇಲಾಖಾ ವ್ಯಾಪ್ತಿಯ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಶುಲ್ಕ ವಸೂಲಾತಿಯನ್ನು ಬ್ಯಾಂಕ್‌ಗಳಲ್ಲಿ ಕಾಲೇಜಿನ ಖಾತೆಗಳಿಗೆ ಚಲನ್ ತುಂಬುವ ಮೂಲಕ ವಸೂಲಿ ಮಾಡುತ್ತಿದ್ದು, ಬಹುತೇಕ ರಾಷ್ಟ್ರೀಯ ಬ್ಯಾಂಕ್‌ಗಳು ಈಗಾಗಲೇ ಈ ಬಗ್ಗೆ ಕಾರ್ಯೋನ್ಮುಖವಾಗಿದ್ದು, ಸಹಕರಿಸುತ್ತಿರುತ್ತಾರೆ.

ಆದರೆ ಕೆಲವೊಂದು ಎಸ್.ಬಿ.ಐ ಬ್ಯಾಂಕಿನ ಮ್ಯಾನೇಜರ್‌ಗಳು ಉದಾ: ಚಿಂತಾಮಣಿ, ಎಸ್‌ಬಿಐ ಬ್ಯಾಂಕ್, ಬಡವನಹಳ್ಳಿ, ಮಧುಗಿರಿ ತಾಲ್ಲೂಕು, ಎಸ್‌ಬಿಐ ಬ್ಯಾಂಕ್ ಹಾಗೂ ನರಗುಂದ ಎಸ್‌ಬಿಐ ಬ್ಯಾಂಕ್‌ನವರು ಸರ್ವರ್ ಡೌನ್‌ನಂತಹ ಕೆಲವೊಂದು ತಾಂತ್ರಿಕ ಕಾರಣದಿಂದ, ಸಿಬ್ಬಂದಿಗಳ ಕೊರತೆಯಿಂದ, ಬ್ಯಾಂಕ್‌ಗಳಲ್ಲಿ ಚಲನ್ ಮೂಲಕ ಹಣ ಪಡೆಯಲು ಸಾಧ್ಯವಿಲ್ಲವೆಂದು, ಹಾಗೂ ಒಂದು ದಿನದಲ್ಲಿ 04 ಅಥವಾ 05 ವ್ಯವಹಾರ (Transactions) ಆದ ಮೇಲೆ ಪ್ರತಿಯೊಂದು ವ್ಯವಹಾರಕ್ಕೆ ರೂ.59/- ನ್ನು ಪಾವತಿಸಬೇಕು ಇಲ್ಲವೇ ಖಾತೆಯಲ್ಲಿರುವ ಮೊತ್ತದಲ್ಲಿ ಕಟಾಯಿಸಿಕೊಳ್ಳಲಾಗುವುದೆಂದು, ತಿಳಿಸಿರುತ್ತಾರೆಂದು ಇದರಿಂದ ಮೇಲ್ಕಂಡ ಬ್ಯಾಂಕ್‌ಗಳಲ್ಲಿ ವ್ಯವಹರಿಸಲು ಸಾಧ್ಯವಾಗುತ್ತಿಲ್ಲವಾದ ಎಸ್.ಬಿ.ಐ ನಲ್ಲಿರುವ ಖಾತೆಗಳನ್ನು ರದ್ದುಪಡಿಸಿ ಈಗಾಗಲೇ ಒಪ್ಪಿಗೆ ನೀಡಿರುವ ಸಿಂಡಿಕೇಟ್ ಬ್ಯಾಂಕ್‌ಗಳಲ್ಲಿ ಹೊಸದಾಗಿ ಖಾತೆ ತೆರೆಯಲು ಅನುಮತಿ ಕೋರುವುದರೊಂದಿಗೆ ಮೇಲ್ಕಂಡ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಡುವಂತೆ ಈ ಕಛೇರಿಗೆ ಮೇಲ್ಕಂಡ ಕಾಲೇಜಿನ ಪ್ರಾಂಶುಪಾಲರುಗಳು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ತಾವು ಭಾರತ ಸರ್ಕಾರದ ಆಶಯದಂತೆ ಎಲ್ಲಾ ವ್ಯವಹಾರವನ್ನು ಆನ್ ಲೈನ್ ಮೂಲಕ ಅಂದರೆ ಬ್ಯಾಂಕಿನ ವ್ಯವಹಾರವನ್ನು ಶುಲ್ಕ ವಸೂಲಾತಿ ಸೇರಿದಂತೆ, ಚಲನ್ ಮೂಲಕ/ಆನ್ ಲೈನ್ ಮೂಲಕ ವ್ಯವಹರಿಸಲು ಸಹಕರಿಸುವಂತೆ ರಾಜ್ಯದ ಎಲ್ಲಾ ರಾಷ್ಟ್ರೀಯ ಬ್ಯಾಂಕ್‌ಗಳ ಮುಖ್ಯಸ್ಥರು/ ಮ್ಯಾನೇಜರ್‌ಗಳಿಗೆ ಸೂಚಿಸುವುದರ ಮೂಲಕ ಕಾಲೇಜಿನ ಶುಲ್ಕ ವಸೂಲಾತಿಯನ್ನು ಬ್ಯಾಂಕಿನ ಮೂಲಕ ವಸೂಲಿ ಮಾಡಲು ಅಗತ್ಯ ಕ್ರಮವಹಿಸಲು ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,

13/9/18

ಕಾಲೇಜು ಶಿಕ್ಷಣ ನಿರ್ದೇಶಕರು

**ಪ್ರತಿ** : ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.

1. ಮುಖ್ಯಸ್ಥರು, ಎಲ್ಲಾ ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಕಮಿಟಿ.
2. ಮುಖ್ಯಸ್ಥರು, ಎಸ್‌ಬಿಐ, ಕೇಂದ್ರ ಕಛೇರಿ, ಕೆಂಪೇಗೌಡ ರಸ್ತೆ, ಬೆಂಗಳೂರು.
3. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಹಾಗೂ ಕಲಬುರಗಿ – ಇಲಾಖಾ ವೆಬ್‌ಸೈಟ್ ಮೂಲಕ
4. ಎಲ್ಲಾ ಪ್ರಾಂಶುಪಾಲರುಗಳು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು–ಇಲಾಖಾ ವೆಬ್‌ಸೈಟ್ ಮೂಲಕ
5. ನೋಡಲ್ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6. ಕಛೇರಿ ಪ್ರತಿ.

*C:\Users\acer\Desktop\20 stores.docx*